Regd No M 1299 34 th Year ತಾ|| 26—3—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಂಸ್ಥೆದಾರ್ ಎಂ. ಎ ಸುಬ್ರಾಯುರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ತಿಂಗಳಿಗೊಂದಾವರ್ತಿ]
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ಶ್ರೀ ಅಶೋಕ
ಚಕ್ರವರ್ತಿಯ ಒಂದು ಚರ್ಯೆ

ಅಶೋಕ ಚಕ್ರವರ್ತಿಯು ತನ್ನ ಅರಮನೆಯನ್ನು ಸಮಾಸಿಸುವ ಎಲ್ಲಾ ಸನ್ಯಾಸಿಗಳಿಗೂ, ಭಿಕ್ಷುಗಳಿಗೂ, ಅವರು ನಿರ್ವಾಣದಿಂದಿರಲಿ, ವಸ್ತ್ರಭೂಷಿತರಾಗಿರಲಿ ಅಥವಾ ಕೌಪೀನಧಾರಿಗಳಾಗಿರಲಿ, ಅವರ ಪಾದಗಳ ಮೇಲೆ ತನ್ನ ಮಸ್ತಕವನ್ನಿಟ್ಟು ಪ್ರಣಾಮ ಮಾಡುವ ರೂಢಿಯನ್ನಿಟ್ಟುಕೊಂಡಿದ್ದನು. ಅತನ ಮಂತ್ರಿಗಳಿಗೆ ಈ ಆಚರಣೆಯು ವಿಪರೀತವಾಗಿ ಕಾಣಬರುತ್ತಿತ್ತು. ಒಂದು ದಿನ ಮುಖ್ಯ ಮಂತ್ರಿಯು ಈ ವಿಷಯದಲ್ಲಿ ಚಕ್ರವರ್ತಿಯನ್ನು ಪ್ರಶ್ನಿಸಲು, ಅತನು ಎಲ್ಲಾ ಪ್ರಾಣಿಗಳ ತಲೆಯನ್ನೂ ಒಂದೊಂದು ಕಸ್ತೂರಿಸಿ ತಂದಲ್ಲಿ ಆಗ ಸಮಾಧಾನವನ್ನು ಕೊಡುವುದಾಗಿ ತಿಳಿಸಿದನು. ಮೂರನೇದಿನ ದರ್ಬಾರು ಸೇರುವ ವೇಳೆಗೆ ಅನೇಕ ಪ್ರಾಣಿಗಳ ತುಂಡುಗಳು ಸಿದ್ಧವಾಗಿದ್ದವು. ಚಕ್ರವರ್ತಿಯು ತನ್ನ ಮುಖ್ಯಮಂತ್ರಿಗೆ ಮನುಷ್ಯನ ರುಂಡವನ್ನೂ ಮಿಕ್ಕ ಮಂತ್ರಿಗಳು ಪ್ರತಿಯೊಬ್ಬರಿಗೂ ಒಂದರಂತೆ ಇತರ ಪ್ರಾಣಿಗಳ ರುಂಡಗಳನ್ನೂ ಕೊಟ್ಟು ಅದನ್ನು ಯಾರಿಗೆ ಅವಶ್ಯವಿದೆಯೋ ಅವರಿಗೆ ಕೊಟ್ಟು ಬನ್ನಿರಿ ಎಂದು ಆಜ್ಞಾಪಿಸಿದನು. ಮನುಷ್ಯನ ರುಂಡವನ್ನು ಯಾರೂ ಇಚ್ಛಿಸಲಿಲ್ಲ. ಮಿಕ್ಕ ರುಂಡಗಳೆಲ್ಲ ವಿನಿಯೋಗವಾದವು. ಮಂತ್ರಿಗಳಿಂದ ಈ ವಿಷಯವನ್ನು ತಿಳಿದ ಕೂಡಲೇ, ಚಕ್ರವರ್ತಿಯು ಮುಖ್ಯ ಮಂತ್ರಿಯನ್ನು ಕುರಿತು ಹೀಗೆ ಹೇಳಿದನು— ನೋಡಿದೆಯಾ! ಮನುಷ್ಯನ ರುಂಡವು ಯಾರಿಗೂ ಬೇಡವಾದ್ದು, ಅತಿ ಊಪಯೋಗಹೀನವಾದದ್ದು. ಇದು ಇಂಥದ್ದೆಂಬ ವಿಷಯವು ನನ್ನ ನೆನಪಿಗೆ ಪದೇ ಪದೇ ಬರುತ್ತಿರಲಿಕ್ಕಾಗಿ ನಾನು ಸ್ವಾಮಿಗಳ ಪಾದಧೂಳಿಯನ್ನು ನನ್ನ ಮಸ್ತಕಕ್ಕೆ ಸೋಕಿಸುವದು.

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಒಪೇರಾ ಟಾಕೀಸ್
ಮೈಸೂರು

ಉಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ
ವನಸುಂದರಿ ❁ Vanasundari
ಪಿ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಬಾಲಯ್ಯ ಪುಳಿಮೂಟೆ
ಕೃಷ್ಣ, ಮಧುರಂ, ಲಲಿತ, ಪದ್ಮಿನಿ ಅಭಿನಯಿಸಿರುವರು
ಅಮೋಘ ಶವಿಳು ಚಿತ್ರ — ಪ್ರತಿ ದಿನ 3 ಆಟಗಳು ; ಮ್ಯಾಟಿನಿ 3 ಗಂಟೆಗೆ

ರಣಜಿತ್ ಯಶಸ್ವಿ 3 ನೇ ವಾರ
ನರ್ಗಿಸ್, ದಿಲೀಪ ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ
BABUL ❁ ಬಾ ಬು ಲ್
ಅಮೋಘ ಹಿಂದಿ ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

ಮುಸ್ಲಿಂ ಅರಸರು ಹಿಂದುವಾದರು

ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ನೀಗ್ರೋ ಪತ್ರಿಕಾ ಕಾರ್ಯಸ್ಥಾಪನೆಯಾಗಿ 124 ವರ್ಷಗಳಾಗಿರುವ ದಕ್ಕಾಗಿ ಅಲ್ಲಿಯ ನೀಗ್ರೋ ಪತ್ರಿಕೆಗಳು ಈ ಸಮಾರಂಭವನ್ನು ವೈಭವದಿಂದ ಆಚರಿಸಿದವು.

ರಷ್ಯಾದಲ್ಲಿ 50 ಲಟಂಬಾಂಬುಗಳಿವೆಯೆಂದು ಅಮೇರಿಕಾದ ಲಟಂ ನಿಪುಣ ವೈ. ॥ ಹೆರಾಲ್ಡ್ ಟ್ರಿಬೂನ್ ನಗರದಲ್ಲಿ ತಿಳಿಸಿರುವನು.

ಚಿರಾಲಾದಲ್ಲಿ ಕಾಳಸಂತೆ ನಡೆಸುತ್ತಿದ್ದ 7 ಮಂದಿ ಒಟ್ಟು ಬಟ್ಟೆವ್ಯಾಪಾರಿಗಳನ್ನೂ 5 ಮಂದಿ ಗುಮಾಸ್ತರನ್ನೂ ದಸ್ತಗಿರಿ ಮಾಡಲಾಗಿದೆ.

ಕಾಂಗ್ರೆಸ್ಸು ವಿರುದ್ಧ ಸಂಯುಕ್ತರಂಗ ರಚಿಸುವುದಾಗಿಯೂ ಕಮ್ಯುನಿಸ್ಟು ಪಕ್ಷ ಅನೇಕ ರೀತಿಯ ತ್ಯಾಗಗಳನ್ನು ಮಾಡಲು ಸಿದ್ಧವಾಗುವದಾಗಿಯೂ ಕಮ್ಯುನಿಸ್ಟ್ ಧುರೀಣ ಗೋಪಾಲ್ ಮುದಂತಾಸಿನಲ್ಲಿ ಹೇಳಿರುವನು.

—

ಪೌರಸಭೆ

ಮೈಸೂರು ಪೌರಸಭೆಯ ವಿಶೇಷಾಧಿವೇಶನ ನಿನ್ನೆ ದಿವಸ ಪೌರಸಭೆಯ ಅಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಪೌರಸಭೆ ಕಟ್ಟಡದಲ್ಲಿ ನಗರಾಭಿವೃದ್ಧಿ ಸಮಿತಿಗೆ ಪಾಲುಕೊಡಬೇಕೆಂಬ ಸರ್ಕಾರಿ ಪತ್ರದ ಬಗ್ಗೆ ಶ್ರೀ ವಾಲಹಳ್ಳಿ ಸೀತಾರಾಮಯ್ಯನವರು ಆ ರೀತಿ ಸಾಧ್ಯವಿಲ್ಲವೆಂದು ಮಂಡಿಸಿದ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಶಾಸನ ಸಭೆಯಲ್ಲಿನ ಮೈಸೂರು ನಗರಾಭಿವೃದ್ಧಿ ಸಮಿತಿ ತಿದ್ದುಪಡಿ ಮಸೂದೆ ಬಗ್ಗೆ ಸಭೆ ಪರಿತೀಲಿಸಿತು.

ಗೋಂಡಾ ರಾಜ ಅಜಂ ಪಾಷಾರವರು ಹಿಂದೂಮತಕ್ಕೆ ಮತಾಂತರ ಹೊಂದಿದರು. ಇವರಿಗೆ 70 ವಯಸ್ಸು.

ಭಾರತ-ಪಾಕಿಸ್ತಾನ ಗಡಿಯಲ್ಲಿನ ಅಭೋರ ಎಂಬ ಊರಿನಲ್ಲಿ ಪೋಲೀಸು ಇಬ್ಬರು ಲಾಭಬಡಕ ಬಟ್ಟೆ ವ್ಯಾಪಾರಿಗಳನ್ನು ಮುಖಕ್ಕೆ ಕಪ್ಪುಬಳಿದು ಕತ್ತೆ ಮೇಲೆ ಕೂರಿಸಿ ಮೆರವಣಿಗೆಮಾಡಿದರು. ಇದಕ್ಕೆ ಪ್ರತಿಭಟಿಸಿ ವರ್ತಕರು ಹರತಾಳ ಮಾಡಿದರು.

ಬೊಂಬಾಯಿನ ಅಗ್ರಿಪಾದದಲ್ಲಿಯ ಹುಡಿಗಿಯೊಬ್ಬಳ ಮೇಲೆ ಅತ್ಯಾಚಾರ ನಡೆಸಲು ಒಬ್ಬನು ಪ್ರಯತ್ನಿಸಿದ್ದರಿಂದ ಭಾರಿ ಹೊಡೆದಾಟವಾಯಿತು.

ಕಲ್ಕತ್ತಾದಲ್ಲಿ ಹೋಳೀ ಹಬ್ಬದಲ್ಲಿ ಬಣ್ಣದ ನೀರನ್ನು ಜನರ ಮೇಲೆ ಎರಚಿದ್ದಕ್ಕಾಗಿ 630 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಕಾಶಿ ವಿಶ್ವವಿದ್ಯಾನಿಲಯಕ್ಕೆ ಕೊಡಲಾಗುತ್ತಿರುವ ಇತರ ಗ್ರಾಂಟುಗಳ ಜೊತೆಗೆ ಈ ವರ್ಷಕ್ಕೆ ರೂ. 820000 ವಿಶೇಷ ಗ್ರಾಂಟು ಕೊಡಲಾಗಿದೆ.

ಜಸ್ಟಿಸ್ ಪಕ್ಷಕ್ಕೆ ಬ್ರಾಹ್ಮಣರನ್ನೂ ಸೇರಿಸಿಕೊಳ್ಳುವ ವಾರ್ತೆ ಇದೆ.

ಫ್ರಾನ್ಸಿನಲ್ಲಿ ಮುಷ್ಕರಗಳ ಹಾವಳಿ ಜೋರಾದುದರಿಂದ ಕಾರ್ಮಿಕರ ವೇತನ ಅಧಿಕಿಸಲು ಸರ್ಕಾರ ನಿರ್ಧರಿಸಿದೆ.

ಕೊರಿಯಾದಲ್ಲಿ 38 ನೇ ಅಕ್ಷಾಂಶ ದಾಟಲು ಅವಶ್ಯಕ ಬಿದ್ದರೆ ದಾಟಬಹುದೆಂದು ಜನರಲ್ ಮೆಕಾರ್ಥರ್ ಅಜ್ಞೆ ಇತ್ತಿದ್ದಾರೆ.

ಪ್ರಧಾನಿಗಳ ಅಸ್ಸಾಂ ನಿಧಿಗೆ ಹೊಡಲಕ್ಷ ರೂ ಸೇರಿಸುವ ಬಗೆಗೆ ಬೊಂಬಾಯಿನಲ್ಲಿ ಪ್ರದರ್ಶನವೇರ್ಪಾಟಾಗುವುದು.

ಸಂಪುಟ ೯ ಸಂಚಿಕೆ ೨೮ ॥ಶ್ರೀ॥ ತಾ॥ 26-3-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಪೀಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾತ್ಮಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಕಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ ವ. ಸ್ವ. ಸಂಘ

ಇಂದಿನ ದಿನದಲ್ಲಿ ಅಂದಿನ ಸದಾಚಾರ

(ಪೂಜ್ಯ ಕಂಚಾತ್ರೀ ಸ್ವಾಮಿಗಳು)

[ಮುಂದುವರಿಬುದು]

ಶ್ರೀ ಗಾಂಧಿಗಳು ಅಹಿಂಸೆಯಿಂದ ವಿಶ್ವಶಾಂತಿಯಾವುಗುವುದೆಂದು ನಿರ್ಧರಿಸಿ, ಅತ್ಯಂತ ವಿಕಂಗಳವಾದ ಹಿಂಸಾಪೂರ್ಣ ವಾತಾವರಣದಲ್ಲಿ ಸಹ ತಮ್ಮ ಅಹಿಂಸೆಯ ದನಿಯನ್ನು ಬ್ರಿಟಿಷ್ ಮತ್ತು ಫ್ರಾನ್ಸುಗಳವರಿಗೆ ಮುಟ್ಟಿಸಿದರು ; ಆ ಜನರು ಇದನ್ನು ಉಪಹಾಸಾಸ್ಪದವಾಗಿ ತಿಳಿದಾಗ್ಯೂ, ಗಾಂಧಿಗಳು ಅವರಿಗೆ ಶಸ್ತ್ರಾಸ್ತ್ರಗಳನ್ನು ಕೆಳಗಿಳಿಸಿ ಅಹಿಂಸಕರಾಗಬೇಕೆಂದೇ ಉಪದೇಶವಿತ್ತರು. ರಾಜನೀತಿಜ್ಞರು ಬೇಕಾದರೆ ಇದನ್ನು ಅವಾಯಂಕರವೆಂದು ತಿಳಿಯಲಿ, ಅಲ್ಲದೆ ತಮ್ಮ ಅಹಿಂಸಾಶಕ್ತಿಯನ್ನು ಅರಿತುಕೊಳ್ಳದೆ ಹೀಗೆ ಮಾಡುವುದನ್ನು ನಾವೂ ಅನುಚಿತವೆಂದೆಣಿಸುವೆವು— ಆದರೂ ಕೂಡ ಶಾಸ್ತ್ರೀಯವಾದ ಸಮಾಜ ವ್ಯವಸ್ಥೆಯ ಮೇಲೆ ನಡೆಯುವುದೆಂದರೆ, ಯಾವುದೇ ತರದ ಅಪಾಯವನ್ನೆದುರಿಸಬೇಕಾದ ಭಯವಿರುವಂತಹ ಸಾಹಸಪೂರ್ಣವಾದ ಅಡಿಯಿಟ್ಟಂತಲ್ಲ. ಅಲ್ಲದೆ ಇಂದಿಗೂ ಬೇರೆಬೇರೆ ದೇಶಗಳಲ್ಲಿಯೂ, ಬೇರೆಬೇರೆ ಜಾತಿಗಳಲ್ಲಿಯೂ, ಸಂಪ್ರದಾಯಗಳಲ್ಲಿಯೂ ರೀತಿನೀತಿ, ಊಟತಿಂಡಿ, ಪೂಜೆಪುರಸ್ಕಾರಗಳಲ್ಲಿ ಭೇದವಿದ್ದೇ ಇದೆ. ಹಿಂದುಗಳ, ಮುಸಲ್ಮಾನರ, ಪಾರಸಿಗಳ, ರಷ್ಯನರ, ಜಪಾನಿಗಳ ವ್ಯವಹಾರದಲ್ಲಿಯೂ ಆಡಳಿತೆಯ ಕ್ರಮಗಳಲ್ಲಿಯೂ ದೊಡ್ಡ ವ್ಯತ್ಯಾಸವಿದೆ. ನಮ್ಮ ಶಾಸ್ತ್ರಗಳಿಗನುಸಾರವಾಗಿ ನಡೆಯುತ್ತಿದ್ದೂ ಕೂಡ ದೇಶದ, ರಾಷ್ಟ್ರದ ಹಾಗೂ ವಿಶ್ವದ ಕ್ಷೇತ್ರದಲ್ಲಿ ಒತ್ತಾಸೆಕೊಡಬಹುದಾಗಿದೆ.

ವಿಮಾನ, ರೇಡಿಯೋ, ವರ್ತಮಾನಪತ್ರಿಕೆ ಮುಂತಾದುವುಗಳು ಬಾಹ್ಯ ರೂಪದಿಂದ ಪ್ರಪಂಚವನ್ನು ಪರಸ್ಪರ ಸಮೀಪಕ್ಕೆ ತಂದಿವೆಯಾದರೂ, ಒಳಗಿನಿಂದ ಒಬ್ಬರಿಂದಿನ್ನೊಬ್ಬರನ್ನು ದೂಕ್ಕೇ ಕೊಂಡೊಯ್ದುಬಿಟ್ಟಿವೆ ಆದ್ದರಿಂದಲೇ ಇಂದು ಒಬ್ಬರ ಗೆಳೆತನದ್ದಾಗಲೀ ಹಗೆತನದ್ದಾಗಲೀ ಸುಳುವೇ ಸಿಕ್ಕುವುದಿಲ್ಲ. ತಂದೆಮಗಂದಿರೂ, ಗಂಡಹೆಂಡದಿರೂ ಕೂಡ ಪರಸ್ಪರರಲ್ಲಿ ಒಳ್ಳೆತನದಲ್ಲಿಲ್ಲ, ಒಂದು ಇಂಗ್ಲೆಂಡಿನಂತಹ ಸಣ್ಣದೇಶವೇ ಜಗತ್ತಿನ ತಲೆಯ ಮೇಲೆ ತನ್ನ ಸಭ್ಯತೆಯನ್ನು ಹೇಂಲು ವ್ಯಗ್ರವಾಗಿರುವಾಗ, ತನ್ನ ಭಾಷೆಯನ್ನು ವಿಶ್ವವ್ಯಾಪಿಯಾಗಿ ಮಾತಲು ಸನ್ನದ್ಧವಾಗಿರುವಾಗ, ಯಾವ ಹಿಂದೂಜಾತಿಯ, ಸಂಖ್ಯೆ ಸಲವತ್ತು ಕೋಟಿ ಇದೆಯೋ, ಅದು ತನ್ನ ಶಾಸ್ತ್ರಾನುಸಾರವಾಗಿ ತನ್ನ ವ್ಯವಸ್ಥೆಯನ್ನು ತನ್ನ ಮೇಲೆ ಪರಕೆ ಅನ್ಯರು ಮಾಡಿಕೊಳ್ಳಬಾರದು ?

ಅಲ್ಲದೆ ನಾವಾದರೋ ಮುಷ್ಟಿ ಮಾತ್ರ ವ್ಯಕ್ತಿಗಳಿನ್ನು ಮಾತ್ರವೇ ನಮ್ಮ ಜಾತಿಗೆ ತಂಬೇಕಾಗಿದೆ, ಅಧಿಕಾಂಶ ಗ್ರಾಮೀಣ ಹಳ್ಳಿಗರು ಹಳೆಯ ಸಹವಾಸಕ್ಕೆ ಮತ್ತು ವಿಶ್ವಾಸವುಳ್ಳವರೇ ಇದ್ದಾರೆ. ಕೆಲವು ಮುಂದಿ ಸವಶಿಕ್ಷಿತರಾದ ನಾಗರಿಕರು ಮಾತ್ರ ಪಾಶ್ಚಾತ್ಯ ಸಭ್ಯತೆಯ ಅನುಯಾಯಿಗಳಾಗಿರುವರು, ಇಂಥವನ್ನು ಸನಾತನಕ್ಕೆ ತರುವುದರಲ್ಲಿ ಪ್ರಯಾಸವಿದೆ. ಆದರೆ ಭೇದವಿಷ್ಟೇ, ಪಾಶ್ಚಾತ್ಯತೆಯಲ್ಲಿ ವಿಶ್ವಾಸವುಳ್ಳವರು ನಿರಂತ್ಸಾಹಿಗಳಾಗಿ ಸತ್ಪವರಂತಾಗುತ್ತಾ

ಶ್ರೀ ದ್ವಾರಕಾ ಜಗದ್ಗುರುಗಳವರು

(ಸ್ವಂ. ಸು. ತಂತಿ)

ದೇಹಗಾಂ ಮಾರ್ಚಿ 24—ಶ್ರೀ ದ್ವಾರಕಾ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು ದೇಹಗಾಂ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಿಗೆ ಭೇಟಿ ಕೊಟ್ಟು, ಸನಾತನ ಧರ್ಮವನ್ನು ಬೋಧಿಸಿ, ಆಷಮದಾ ಬಾದಿಗೆ ತಾ॥ 26 ರೋವುವಾರ ಆಗಮಿಸುವರು ; ಮತ್ತು ಏಪ್ರಿಲ್ ಮೊದಲನೆ ವಾರದಲ್ಲಿ ವಾಧಾಂ ಹತ್ತಿರದ ಬರಕಾಲಿಯಲ್ಲಿ ನಡೆಸ್ಪಡುವ ಸಹಸ್ರಚಂಡಿ ಮಹಾಯಜ್ಞದ ಅಧ್ಯಕ್ಷತೆ ವಹಿಸುವರು. ನಂತರ ಶ್ರೀರಾಮನವಮಿ ದಿನದಿಂದ ಹರಿದ್ವಾರದಲ್ಲಿ ಖಿಲ್ ವಿಶ್ವವಿದ್ಯಾಲಯದ ವಾರ್ಷಿಕೋತ್ಸವದಲ್ಲಿ ಭಾಗವಹಿಸುವರು. ನಂತರ ಕಾಶಿಪುರದಲ್ಲಿ ಏಪ್ರಿಲ್ ತಾ॥ 19 ರಿಂದ 26 ರವರೆಗೆ ನಡೆಯುವ ಅಖಿಲಭಾರತ ಧರ್ಮಸಂಘದ ಅಧಿವೇಶನ ಮತ್ತಿತರ ಹಲವು ಸಮ್ಮೇಳನಗಳ ಅಧ್ಯಕ್ಷತೆ ವಹಿಸುವರು.

ದ್ವಾರಕಾ ದೇವಾಲಯಗಳಿಗೆ ರೇಷ್ಮೆ ನಿಲ್ಲಿಸಿರುವುದನ್ನು ಕೊಡಿಸಿ

[ಸ್ವಂ. ಸು. ತಂತಿ]

ದೇಹಗಾಂ ಮಾ 20— ದೇಹಗಾಂನಲ್ಲಿ ಸನಾತನ ಧರ್ಮ ಸಮ್ಮೇಳನವು ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಕಳೆದ ಶಕ್ರವಾರ ಅತ್ಯಂತ ವೈಭವದಿಂದ ಜರುಗಿತು. ಹಿಂದೂ ಕೋಡು, ಗೋಹತ್ಯೆ, ಆಹಾರ ನಿಯಂತ್ರಣ ಮೊದಲಾದುವನ್ನು ನಿರೋಧಿಸುವ ಠರಾವುಗಳು ಜಗದ್ಗುರುಗಳವರ ಸ್ಫೂರ್ತಿದಾಯಕ ಬೆಂಬಲ ಭಾಷಣದೊಡನೆ ಮಂಜೂರಾದವು ಶ್ರೀ ಜಗದ್ಗುರುಗಳು ಪ್ರಖ್ಯಾತ ಶ್ರೀ ಉತ್ಕಂಠೇಶ್ವರ ದೇವಾಲಯಕ್ಕೆ ಭೇಟಿ ಕೊಟ್ಟು ಚಾಲಾಕ್ಕೆ ಆಗಮಿಸಿದರು. ದ್ವಾರಕಾ ದೇವಾಲಯಗಳ ರೇಷ್ಮೆ ಕೋಟಾವನ್ನು ನಿಲ್ಲಿಸಿರುವ ಆಜ್ಞೆಯನ್ನು ವಾಪಸ್ಸು ತೆಗೆದುಕೊಂಡು ಕೋಟ್ಯಾಂತರ ಭಕ್ತರನ್ನು ಸಂತೃಪ್ತಗೊಳಿಸಬೇಕೆಂದು ಮಾನ್ಯ ಮುನಷಿ, ಮತ್ತು ಬೊಂಬಾಯಿ ಮುಖ್ಯಮಂತ್ರಿ ಮತ್ತು ಆಡಳಿತ ಮಂತ್ರಿಗಳಿಗೆ ಜಗದ್ಗುರುಗಳು ತಂತೀಕಳುಹಿಸಿದರೆ.

ಗುತ್ತಿದ್ದಾರೆ. ನವೀನತಾವಾದಿಗಳ ಡ್ರೈವರಿಲ್ಲದ ಮೆಶಿನಿನಂತಾಗುತ್ತಿದ್ದಾರೆ, ಇಬ್ಬರ ಸ್ಥಿತಿಯೂ ಚೆನ್ನಾಗಿಲ್ಲ ಒಂದು ಕಡೆ ಪ್ರಾಚೀನತೆಯ ವಿಶ್ವಾಸಿಗಳಲ್ಲಿ ಜೀವ ಹುಟ್ಟಿಸಬೇಕು, ಇನ್ನೊಂದೆಡೆ ನವೀನತಾವಾದಿಗಳ ನಿಯಂತ್ರಣವಿಟ್ಟು ಕೊಳ್ಳಬೇಕು— ಸರಿ, ಕೆಲಸವಾದಂತೆ ಒಂದುವೇಳೆ ವಿಶಾಲ ಹಿಂದೂರಾಷ್ಟ್ರವು ಒಂದು ಸುಪರಿಷ್ಕೃತವಾದ ಶಾಸ್ತ್ರೀಯ ಸಭೆಯ ಮೇಲೆ ನಡೆದು ಪ್ರಪಂಚದೆದುರಿನಲ್ಲಿ ತನ್ನ ಆದರ್ಶವನ್ನಿಡಬಲ್ಲುದಾದರೆ! ಬೆರೆ ಸಭ್ಯತೆಗಳಿಂದ ಜರು ಪ್ರಭಾವಿತವಾಗುವ ಮಾತೇ ಇಲ್ಲ, ಬದಲಿಗೆ ಬೇರೇ ರಾಷ್ಟ್ರಗಳೇ ಇದರಿಂದ ಪ್ರಭಾವಿತವಾಗಬಹುದು.

ಬೇರೆ ಬೇರೆ ದೇಶಗಳಲ್ಲಿ ಜಡವಿಜ್ಞಾನದ ಉನ್ನತಿಯೇನೋ ಆಗಿದೆ, ಆದರೆ ಅದರಿಂದ ಕಾದಾಟ, ಅಶಾಂತಿ ಹಾಗೂ ವಿನಾಶದ ಹೊರತು ಮತ್ತೇನು ಸಿಕ್ಕಿದೆ? ಈ ಉನ್ನತಿಯದೇ ಫಲವಾಗಿ ಎಣ್ಣೆ ಕಲ್ಲಿದ್ದಲು, ವ್ಯಾಪಾರ ಕ್ಷೇತ್ರಗಳಿಗಾಗಿ ಹೊಡೆಯುವುದು ಬಡಿಯುವುದು ಸಾಯುವುದು ಕೊಲ್ಲುವುದು. ಇದರಿಂದ ಯಾರಿಗೂ ಆಧ್ಯಾತ್ಮಿಕವಾಗಲೀ ಆದಿಭೌತಿಕವಾಗಲೀ ಯಾವುದೇ ತರದ ಸುಖವು ತಪ್ಪಲಿಲ್ಲ, ತಪ್ಪುವ ಸಂಭವವೂ ಇಲ್ಲ. ನಮ್ಮ ಋಷಿಗಳು ವಿಜ್ಞಾನವನ್ನು ತಿಳಿದಿಲ್ಲವೆಂದಾಗಲೀ ಜಡಯಂತ್ರವನ್ನು ಪ್ರಯೋಗಿಸಲಿಲ್ಲವೆಂದಾಗಲೀ ಹೇಳಲಾಗದು : ಅವರು ಎಲ್ಲವನ್ನೂ ತಿಳಿದಿದ್ದರು, ಅವುಗಳ ಪ್ರಯೋಗವನ್ನೂ ಮಾಡಿದ್ದರು. ಆದರೆ ಅದರಿಂದ ಹಾನಿಯನ್ನರಿತು ಬಿಟ್ಟುಬಿಟ್ಟರು. ಹಾಗೂ ಮುಂದಿನವರಿಗೆ ಮಹಾಯಂತ್ರಗಳ ನಿರ್ಮಾಣವು ಹಾನಿಕರವೆಂದು ನಿಷೇಧಮಾಡಿಹೋದರು.

[ಮುಂದುವರಿಯ ಎತ್ತದು

Edited, Printed and Published by M. S. Krishna Rao, at the Satyavadi Press Chamarajapuram Mysore

ರಾ ಮ ರಾ ಜ್ಯ

(ವಿದ್ಯಾಭೂಷಣ, ಭಿಷಗ್ರತ್ನ ಪಂಡಿತ ಕೆ. ಪಿ. ಪುರಾಣಿಕ್)

ಮಹಾತ್ಮಾ ಗಾಂಧಿಯವರು ನಮ್ಮ ಮೈಸೂರಿನ್ನು 'ರಾಮರಾಜ್ಯ' ವೆಂದು ಹೊಗಳಿದ್ದರು ; ನಿಜ, ಆಗಿನ ಪರಿಸ್ಥಿತಿ ಹಾಗಿತ್ತು. ಭಾರತವು ಸ್ವತಂತ್ರವಾಯಿತು. ಮೈಸೂರಿನಲ್ಲಿಯೂ ಪ್ರಜಾರಾಜ್ಯವಾಯಿತು ; ಸ್ಥಿತಿಗತಿಗಳು ಒಡಲ್ಲಾವಣೆ ಹೊಂದಿದವು. ಹಿಂದೆ ಇದ್ದ ಪರಿಸ್ಥಿತಿಯು ಇಂದು ಇಲ್ಲ ; ಜನಗಳಿಗೆ ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲ, ಉಡಲು ಬಟ್ಟೆಯಿಲ್ಲ : ಪದಾರ್ಥಗಳ ಧಾರಣವಾಸಿಗಳು ಬೆಳೆಯುತ್ತಲೇ ಇವೆ ; ಕಳ್ಳಸೂರುಕಟ್ಟೆಯು ಹೆಚ್ಚಾಗಿದೆ : ಸತ್ಯ, ನ್ಯಾಯ, ನೀತಿಗಳು ದೇಶವನ್ನೇ ಬಿಟ್ಟುಹೋಗಿವೆ ; ಲಂಚ, ರುಸುವತು, ಮೋಸ, ಕಳ್ಳತನಗಳು ವಿಪರೀತ ಹೆಚ್ಚಾಗಿವೆ. ಇದನ್ನು ತಹಬಂದಿಗೆ ತರಲು ಸರ್ಕಾರದವರಿಂದಲೂ ಸಾಧ್ಯವಿಲ್ಲವಾಗಿದೆ. ಅವರು ತಮಗೆ ತೋರಿದ ಕಾನೂನಿನ ಪ್ರಕಾರ ಯಾವುದಾದರೊಂದು 'ಹತೋಟಿ' ಆಜ್ಞೆಯನ್ನು ಜಾರಿಮಾಡಿದರೆ ಲಂಚ ಮೋಸ, ಅನ್ಯಾಯ, ಕಳ್ಳತನಗಳಿಗೆ ಪುಟಕೊಟ್ಟಂತಾಗುತ್ತದೆ. ಪ್ರಜಾಮಂತ್ರಿಗಳೇ ಆಳತಕ್ಕವರಾಗಿದ್ದರೂ ಅವರಿಗೂ ಸೆಂಟರಿಷ್ಟರ್, ಬೇಕು ಬೇಡಾದವರಿಲ್ಲರೂ ಇದ್ದಾರೆ. ಅದನ್ನೆಲ್ಲವನ್ನೂ ಬಿಟ್ಟುಬಿಟ್ಟು ಇರುವುದು ಅವರಿಂದ ಆಗದ ಮಾತು. ಅವರು ಮಂತ್ರಿಸಟ್ಟವನ್ನು ಸ್ವೀಕರಿಸಿದಾಗ ತಾನು 'ನಿಃಸ್ವಾರ್ಥಿಯಾದ ಯತಿಗಳಂತೆ ನಡೆಯುತ್ತೇನೆ' ಎಂಬ ಪ್ರತಿಜ್ಞೆಯನ್ನು ಮಾಡಿರಲಾರರು ಆದುದರಿಂದ ಜನಗಳಿಗೆ ಉಂಟಾಗಿರುವ ಈಗಿನ ಕಷ್ಟಗಳನ್ನು ಪರಿಹರಿಸಲು ಜನಗಳೇ ಯತ್ನಿಸಬೇಕಾಗಿದೆ ಈಗ ಕಷ್ಟನಷ್ಟಗಳೆಲ್ಲಾ ಉಂಟಾಗುತ್ತಿರುವುದು ಬಡವರಿಗೆ, ಶ್ರೀಮಂತರಿಗೆ ಅಲ್ಲ ಧಾರಣೆವಾಸಿಗಳು ಎಷ್ಟು ಹೆಚ್ಚಾಗಿದ್ದರೂ ಶ್ರೀಮಂತರು ಪದಾರ್ಥಗಳನ್ನು ಕೊಂಡುಕೊಂಡು ಸುಖಜೀವನ ನಡೆಸುತ್ತಿದಾರೆ ; ಪದಾರ್ಥಗಳನ್ನು ದಾಸ್ತಾನುಮಾಡಿಟ್ಟುಕೊಳ್ಳುತ್ತಾರೆ ; ಕೆಲವರು ಇದೇ 'ಪುಣ್ಯ ಕಾಲ' ವೆಂದು ಬಚ್ಚಿಟ್ಟಿದ್ದ ಪದಾರ್ಥಗಳನ್ನ ಬಡವರಿಗೆ ಹೆಚ್ಚು ಬೆಲೆಗೆ ಮಾರಿ ಲಾಭಗಳಿಸುತ್ತಿದ್ದಾರೆ ಕಷ್ಟಗಳೆಲ್ಲವೂ ಕೈಯಲ್ಲಿ ಹಣವಿಲ್ಲದ ಬಡವರಿಗೋಸ್ಕರ ವಿನಾಸಲಾಗಿ ಹುಟ್ಟಿರುವಂತಿದೆ ಪರಿಸ್ಥಿತಿ. ಈ ಭಯಾನಕ ಪರಿಸ್ಥಿತಿಯನ್ನು ನಿವಾರಿಸಲು ಬಡಜನಗಳೇ ದುಡಿಯಬೇಕಾಗಿದೆ ದೇಶದಲ್ಲಿ ಇದಕ್ಕಾಗಿ ಒಂದು 'ಧರ್ಮಸೇನೆ' ಯು ಸ್ಥಾಪಿಸಿವಾಗಬೇಕಾಗಿದೆ. ನಿಃಸ್ವಾರ್ಥ ಬುದ್ಧಿಯಿಂದ ದೇಶಸೇವೆ ಮಾಡತಕ್ಕ ಸ್ವಯಂಸೇವಕದಳವೊಂದು ಏರ್ಪಡಬೇಕು; ಜನತೆಗೆ ದ್ರೋಹಮಾಡುವವರನ್ನು ಹಿಡಿದು ತಕ್ಕ ಶಾಸ್ತಿಯಾಗುವಂತೆ ಕಾರ್ಯಕ್ರಮ ನಡೆಸಬೇಕು : ಮುಂದೆ ಅಂಥಾ ಅನ್ಯಾಯಗಳು ನಡೆಯದಂತೆ ಸರಿಪಡಿಸಬೇಕು : ನಿಜವಾದ ರಾಮರಾಜ್ಯ ಸ್ಥಾಪನೆಯಾಗಬೇಕು.

SHAKTI
SUDHA

A Superb Tonic

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

For Quality Printing

L. N. Press

Sivarampet, Mysore



"ಗೋರಕ್ಷಣೆ"

ಪ್ರತಿ ತಿಂಗಳ ತಾ|| ೧೦ರಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪಾಣಿದಯೆ, ಸಚ್ಚಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ, ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಾಗೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

ಅಮೆರಿಕಾದ ಗಾಳಿಯಾಟದ ಆಂಬುಲೆನ್ಸ್ ವಿಮಾನ

ನಗ್ನತತ್ವ (Nudism)

ನಾಗರೀಕತೆಗೆ ವೇಷಭೂಷಗಳೇ ಮುಖ್ಯವೆಂಬ ಕಾಲವು ಬದಲಾಯಿಸುತ್ತಿರುವಂತಿದೆ : ವೇಷವೆಂದರೆ ವಸ್ತ್ರಧಾರಣೆಯೆಂದು ಹೇಳಬೇಕಾಗಿಲ್ಲ.

ದೇಶಗಳನ್ನು ಹಿಡಿಯುವದು ವಸ್ತ್ರಧಾರಣೆಯು ಬದಲಾವಣೆಯಾಗುತ್ತಿರುತ್ತದೆ ; ಹಿಂದೂದೇಶದಂಥಾ ಸ್ಥಳದಲ್ಲಿಯೂ ಕೂಡ ಚಿಲ್ಲೆಗೆ ಒಂದು ಬಗೆಯ ಉಡುಗೆಯು ಕಾಣಬರುತ್ತದೆ.

ಕುಲ ಮುತ ಶತ್ವಗಳು ಕೆಲಸಕ್ಕೆ ಬಾರವು ; ಅವು ಸೂಚಿಸುವ ಜನಿವಾರ, ಪೂಂಗಲ್ಯ ಇತ್ಯಾದಿಗಳು ಕೂಡ ವಿಸರ್ಜಿಸಲ್ಪಡಬೇಕೆಂದು ಹೇಳುವ ನಾಸ್ತಿಕವಾದವು ಪ್ರಬಲವಾಗುತ್ತಿರುವ ಈ ಕಾಲದಲ್ಲಿ, ಅವುಗಳ ಗತಿಯೇ ಬಟ್ಟೆಗಳಿಗಳಿಗೂ ಕೂಡ ಹಿಡಿಯುವಂತೆ ಕಾಣಬರುತ್ತಿದೆ : ಬಜಾರಿನಲಿ ಬಟ್ಟೆಗಳಿಗೆ ಬರ ಬಂದಲ್ಲಿ ನಗ್ನ ತತ್ವವು ಎಲ್ಲರಿಗೂ ಅನುಸರಣೀಯವಾಗುತ್ತದೆ.

' ಬರೀ ಮೈಯಲ್ಲಿ ಎಕೆ ಇರುವೆ ? ' ಎಂದು ತಾಯಿಯು ಕೂಗಾಡಿದಲ್ಲಿ ಹುಡುಗನು ಬಟ್ಟೆಯನ್ನು ಧರಿಸದೆ ಹೋಗುವಿಕೆ ಎಂದಲ್ಲ ; ಉಡದಾರವು ಕೂಡ ಇಲ್ಲದೇ ಹೋಗುವುದರಿಂದ, ಪೂಜೆಗಳಲ್ಲಿ ಸುವರ್ಣಕ್ಕೆ ಬದಲು ಕಾಲಾಣೆಯ ನ್ನೋ, ಅಕ್ಷತೆಯನ್ನೋ ಸಮರ್ಪಣೆ ಮಾಡುವಂತೆ, ಉಡುವ ಬಟ್ಟೆಗೆ ಬದಲು ಶಟಸೂತ್ರವಿದ್ದಲ್ಲಿ ಸಾಕು ಎಂದನ್ನಿಸುತ್ತದೆ,

ನಗ್ನ ತತ್ವವನ್ನು ಅವಲಂಬಿಸುವಿಕೆಯಲ್ಲಿ ಅನೇಕ ಸದುಪಾಯಗಳಿವೆ ; ಖರ್ಚು ಕಡಮೆಯಾಗುತ್ತದೆ ; ಅಷ್ಟೇ ಅಲ್ಲ—

ಶರೀರದ ಮೇಲೆಲ್ಲಾ ಬಟ್ಟೆಯು ಯಾವಾಗಲೂ ಇದಲ್ಲಿ ಗಾಳಿ ಸೋಕಿಸಲು ಬೀಳದೆ ಶರೀರವನ್ನು ಅನಾರೋಗ್ಯಕ್ಕೆ ಈಡುಮಾಡುವದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ನಗ್ನ ಸಂಘಗಳಿವೆ ; ಅವುಗಳಲ್ಲಿ ಸ್ತ್ರೀಯರೂ, ಪುರುಷರೂ— ನಿರ್ಣೀತ ಸಮಯದಲ್ಲಿ ಅಲ್ಲಿ ಸೇರಿ ಸ್ನಾನವನ್ನು ಮಾಡಿ, ಬಯಲಿನಲ್ಲಿಯೋ, ಗಾಳಿಯಲ್ಲಿಯೋ ಒದ್ದಾಡಿಕೊಂಡು, ಸಿಕ್ಕಾಯಿ ತಿರುಗಿ, ಕಾಲಕ್ಷೇಪಮಾಡುತ್ತಿರುತ್ತಾರೆ

ಕೆಲವರು ಧರಿಸುವ ಗೌನುಗಳೂ, ಹಾಫ್‌ಪೆಂಟುಗಳೂ ನೋಡಿವಂತೆ ತತ್ವದಲ್ಲಿ ಅಕ್ಷರಾಭ್ಯಾಸವನ್ನು ಮಾಡುತ್ತಿರುವಂತೆ ಕಾಣಬರುತ್ತದೆ.

ಭಾರತ ದೇಶದಲ್ಲಿ ನಗ್ನ ಕೇಂದ್ರಗಳು ಯಾವದಾದರೂ ಇದೆಯೇ ? ಯಾರೇ ಕೇಳುವರೇನೋ ?

ಬಹಳ ಒಳ್ಳೇ ಪ್ರಶ್ನೆ !

ಭಾರತ ದೇಶವೇ ಒಂದು ನಗ್ನ ಕೇಂದ್ರ : ನೂರು ಮಂದಿಯಲ್ಲಿ ಯಾರೋ ಹತ್ತು ಮಂದಿ ಪೂರ್ತಿಯಾಗಿ ವಸ್ತ್ರಗಳನ್ನು ಧರಿಸಬಲ್ಲ ಧನಿಕರು, ಶೇಕಡಾ 20 ಮಂದಿ ಅರ್ಧ ನಗ್ನರಿರುತ್ತಾರೆ ; ಮಿಕ್ಕವರೆಲ್ಲರೂ ಕೇವಲ ಸಂಸ್ಕೃತಿಗಿಯೋ, ಮಾನವನ್ನು ಮುಚ್ಚಿಕೊಂಡೋ ಕಾಲಕ್ಷೇಪ ಮಾಡುತ್ತಿದ್ದಾರೆ

ನಗ್ನ ಸ್ಥಿತಿಯು ಸತ್ಯವಾದದ್ದು ಎನ್ನುವದು ; ನಮಗೆ ಸತ್ಯ ಬಿಟ್ಟು ದೂರವಿಲ್ಲದ ಸೂಚನೆಗಳಿವೆ. ಜೈ ಹಿಂದ್ !

— ನಗ್ನಮೇವ ಜಯತಿ — (ಪ್ರವಾಸಿ)

ಮಹಾ ಚುನಾವಣೆಯಲ್ಲಿ ಮೈಸೂರು ಕಾಂಗ್ರೆಸ್ ಗೆಲ್ಲುವದು

ಮಹಾ ಚುನಾವಣೆಯಲ್ಲಿ ಮೈಸೂರು ಕಾಂಗ್ರೆಸ್ ವಿಜಯ ಗಳಿಸುವ ಭಾವನೆ ತನಗಿದೆಯೆಂದು ಸಚಿವ ಶ್ರೀ ಕೆ.ಟಿ ಭಾಷ್ಯಂ ಶಾಸನ ಸಭೆಯಲ್ಲಿ ಅಬ್ದುಲ್ಲ ರಹಮಾನರ ಪ್ರಶ್ನೆಗೆ ಉತ್ತರಿಸಿದ್ದರು

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ಕಡೆದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್



ಆಟದ ಸಾಮಾನುಗಳಲ್ಲಿ ಹುಡುಗರು ಗಾಡಿ ಕಟ್ಟುತ್ತಿವೆ